ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆರೋಗ್ಯ ಸೌಧ, 5ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023

ಸಂಖ್ಯೆ: ಪಿಆರ್‌ಎಂ/159/2020-21 ದಿನಾಂಕ:06-02-2021

ಅಧಿಕೃತ ಜ್ಞಾಪನಾ ಪತ್ರ

ವಿಷಯ:- 2020-21ನೇ ಸಾಲಿನ 2ನೇ ವರ್ಷದ ಬಿ.ಫಾರ್ಮ ಪದವಿ ವ್ಯಾಸಂಗಕ್ಕೆ ಸೇವಾನಿರತ ಫಾರ್ಮಸಿ ಅಧಿಕಾರಿ ಹಾಗೂ ಹಿರಿಯ ಫಾರ್ಮಸಿ ಅಧಿಕಾರಿರವರನ್ನು ಆಯ್ಕೆ ಮಾಡುವ

ಉಲ್ಲೇಖ:-
1. ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ವಿವಿ-2/04/2020-21 ದಿನಾಂಕ: 25-12-2020
2. ಈ ನಿರ್ದೇಶನಾಲಯದ ಸಮಸಂಖ್ಯೆಯ ಸುತ್ತೋಲೆ ದಿನಾಂಕ 11-01-2021

*****

1. ಕರ್ನಾಟಕ ಸೆಲೆಕ್ಷನ್ ಆಫ್ ಕ್ಯಾಂಡಿಡೇಟ್ಸ್ ಫಾರ್ ಆಡ್ಮಿಷನ್ ಟು ಫಾರ್ಮಾಸಿ ಅಂಡ್ ನರ್ಸಿಂಗ್ ಕೋರ್ಸ್‌ನ ನಿಯಮ 1999ರ ಪ್ರಕಾರ ಆರೋಗ್ಯ ಮತ್ತು ಕು.ಕ. ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವಾನಿರತ ಫಾರ್ಮಸಿ ಅಧಿಕಾರಿ 2020-21ನೇ ಸಾಲಿನ ಬಿ.ಫಾರ್ಮ ಪದವಿ ವ್ಯಾಸಂಗಕ್ಕಾಗಿ ಆಯ್ಕೆ ಮಾಡಿದ್ದು, ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.
2. ಆಯಾ ಬಡವಾಡೆ ಅಧಿಕಾರಿಗಳು/ ಸಂಬಂಧಿಸಿದ ಮೇಲಾಧಿಕಾರಿಗಳು, ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳಲ್ಲಿ ನಿಗದಿಪಡಿಸಿರುವಂತೆ ನಮೂನೆ 19 ರನ್ವಯ ಬಾಂಡ್ ಅನ್ನು ಸಂಬಂಧಿಸಿದ ನೌಕರರುಗಳಿಂದ ಪಡೆಯುವುದು.
3. ಕರ್ನಾಟಕ ಸರ್ಕಾರಿ ಸೇವಾ ನಿಯಮ 7ರ ಅನುಬಂಧ-01 ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬಿ.ಫಾರ್ಮ ಪದವಿ ವ್ಯಾಸಂಗಕ್ಕೆ ಆಯ್ಕೆಯಾದ ಸೇವಾನಿರತ ಫಾರ್ಮಸಿ ಅಧಿಕಾರಿರವರಿಗೆ ಪರಿಶಿಷ್ಠ 2ರ ಪ್ರಕಾರ ಪ್ರತಿನಿಯೋಜನೆಯ ಸೌಲಭ್ಯವಿರುತ್ತದೆ. ಪ್ರಥಮ ಬಾರಿಗೆ ಬಿ-ಫಾರ್ಮ ಪದವಿ ವ್ಯಾಸಂಗಕ್ಕೆ ಆಯ್ಕೆಯಾಗಿರುವ ಸೇವಾನಿರತ ಫಾರ್ಮಸಿ ಅಧಿಕಾರಿ ಆಯ್ಕೆ ಮಾಡಿರುವ ಕಾಲೇಜಿನಲ್ಲಿ ಫಾರಂ-ಎ ಅನ್ನು ಭರ್ತಿ ಮಾಡಿ ಕಾಲೇಜಿನ ಪ್ರಾಂಶುಪಾಲರ ಮೂಲಕ ಸಲ್ಲಿಸತಕ್ಕದ್ದು.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಅಥವಾ ಸಂಬಂಧಪಟ್ಟ ಮೇಲಾಧಿಕಾರಿಗಳು ಅಫಿಡೆವಿಟ್ ಮತ್ತು ಬಾಂಡ್‌ಗಳನ್ನು ಪಡೆದು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಮೇಲಿನ ದಾಖಲಾತಿಗಳನ್ನು ಪಡೆಯದೆ ಬಿ.ಫಾರ್ಮ ಪದವಿ ವ್ಯಾಸಂಗಕ್ಕೆ ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದ್ದಲ್ಲಿ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು ಸರ್ಕಾರ ತೆಗೆದುಕೊಳ್ಳುವ ಕ್ರಮಕ್ಕೆ ನೇರ ಹೊಣೆಗಾರರಾಗಿರುತ್ತಾರೆ.
5. ಈ ಅಧಿಕೃತ ಜ್ಞಾಪನಾ ಪತ್ರದ ಅನುಬಂಧದಲ್ಲಿ ಲಗತ್ತಿಸಿರುವ 2020-21ನೇ ಸಾಲಿನ ಬಿ.ಫಾರ್ಮ ಪದವಿ ವ್ಯಾಸಂಗಕ್ಕೆ ಆಯ್ಕೆಯಾದ ಸೇವಾನಿರತ ಫಾರ್ಮಸಿಸ್ಟ್‌ಗಳು ಸರ್ಕಾರಿ ಫಾರ್ಮಸಿ ಕಾಲೇಜಿನಲ್ಲಿ ಬಿ.ಫಾರ್ಮ ಕೋರ್ಸಿಗೆ ಪ್ರವೇಶ ಪಡೆಯುವ ಸಂಬಂಧವಾಗಿ ಕೂಡಲೇ ಪ್ರಾಂಶುಪಾಲರು, ಸರ್ಕಾರಿ ಫಾರ್ಮಸಿ ಕಾಲೇಜು, ಬೆಂಗಳೂರು ಇವರಿಗೆ ಮೂಲ ದಾಖಲಾತಿಗಳನ್ನು ಸಲ್ಲಿಸಿ, ಪರಿಶೀಲನೆ ನಂತರ, ಪ್ರವೇಶ ಪಡೆಯಲು ಸೂಚಿಸಿದೆ. ತದನಂತರ ಕೆಲಸ ಮಾಡುತ್ತಿರುವ ಮೂಲ ಸ್ಥಾನದ ಕರ್ತವ್ಯದಿಂದ ಬಿಡುಗಡೆ ಹೊಂದಿ ಬಿ.ಫಾರ್ಮ ವ್ಯಾಸಂಗಕ್ಕೆ ಈ ಕೂಡಲೇ ವರದಿ ಮಾಡಿಕೊಳ್ಳಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಆಯ್ಕೆಯನ್ನು ರದ್ದುಪಡಿಸಿ ಕಾಯ್ದಿರಿಸಿದ ನೌಕರರನ್ನು ವ್ಯಾಸಂಗಕ್ಕೆ ಆಯ್ಕೆ ಮಾಡಲಾಗುವುದು.

6. ಬಿ.ಫಾರ್ಮ ಉನ್ನತ ವ್ಯಾಸಂಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆ ಮಾಡಲಾದ ಕಾಲೇಜಿನಲ್ಲಿ ಮಾತ್ರ ಹಾಜರಾಗತಕ್ಕದ್ದು. ಯಾವುದೇ ಕಾರಣಕ್ಕೂ ಕಾಲೇಜು ಬದಲಾವಣೆಗೆ ಅವಕಾಶ ಇರುವುದಿಲ್ಲ.

7. ಆಯ್ಕೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ವ್ಯಾಸಂಗವನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಅನುತ್ತೀರ್ಣರಾದಲ್ಲಿ ಅಥವಾ ವ್ಯಾಸಂಗದ ಅವಧಿಯ ಮಧ್ಯದಲ್ಲಿ ತ್ಯಜಿಸಿದಲ್ಲಿ ಕೆ.ಸಿ.ಎಸ್.ಆರ್. ನಿಯಮಾವಳಿ ಪ್ರಕಾರ ಈ ಅವಧಿಯಲ್ಲಿ ನೀಡಿರುವ ವೇತನ ಹಾಗೂ ಇತರೆ ಭತ್ಯೆಗಳನ್ನು ಸರ್ಕಾರಕ್ಕೆ ಹಿಂದಿರುಗಿಸಬೇಕಾಗುತ್ತದೆ ಹಾಗೂ ದಂಡ ಪಾವತಿಸಬೇಕಾಗಿರುತ್ತದೆ ಎಂಬ ಷರತ್ತಿಗೊಳಪಟ್ಟಿರುತ್ತದೆ.

ಅಧ್ಯಕ್ಷರು,
Director of Medical Education
Govt. of Karnataka, Bangalore
ಬಿ-ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಸಲ್ಲಿಸಿದೆ/ರವಾನಿಸಿದೆ.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳ ಆಯುಕ್ತಾಲಯ, ಬೆಂಗಳೂರು.
3. ಪ್ರಾಂಶುಪಾಲರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಸುಬ್ಬಯ್ಯ ವೃತ್ತ, ಬೆಂಗಳೂರು.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮಂಡ್ಯ/ಹಾಸನ/ಕೋಲಾರ ಜಿಲ್ಲೆ.
5. ವೈದ್ಯಕೀಯ ಅಧೀಕ್ಷಕರು, ಜಿಲ್ಲಾ (ಬಿಮ್ಸ್ ಬೋಧಕ) ಆಸ್ಪತ್ರೆ, ಬೆಳಗಾವಿ
6. ಸದಸ್ಯ ಕಾರ್ಯದರ್ಶಿಗಳು, ಬಿ-ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
7. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮದ್ದೂರು ಮಂಡ್ಯ ಜಿಲ್ಲೆ.
8. ವೈದ್ಯಾಧಿಕಾರಿಗಳು, ಪ್ರಾ.ಆ. ಕೇಂದ್ರ, ದೊಡ್ಡಜಿನ್ನಹಳ್ಳಿ, ತಾ:ಬಂಗಾರಪೇಟೆ, ಕೋಲಾರ ಜಿಲ್ಲೆ.
9. ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ, ದಿಡಗ, ತಾ;ಚನ್ನರಾಯಪಟ್ಟಣ, ಹಾಸನ ಜಿಲ್ಲೆ
10. ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ, ಬೂದನಹಳ್ಳಿ, ಹಾಸನ
11. ಸಂಬಂಧಪಟ್ಟ ನೌಕರರಿಗೆ.
12. ಕಛೇರಿ ಪ್ರತಿ.

## ಅನುಬಂಧ

**2020–21ನೇ ಸಾಲಿನ ಬಿ–ಫಾರ್ಮ ಪದವಿ ವ್ಯಾಸಂಗಕ್ಕೆ ಆಯ್ಕೆಯಾಗಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವಾನಿರತ ಫಾರ್ಮಸಿ ಅಧಿಕಾರಿಗಳ ವಿವರಗಳು.**

| ಕ್ರ.ಸಂ | ನೌಕರರ ಹೆಸರು ಮತ್ತು ವಿಳಾಸ | ವರ್ಗ | ಆಯ್ಕೆಯಾಗಿರುವ ಫಾರ್ಮಸಿ ಕಾಲೇಜು |
|---|---|---|---|
| 1 | ಶ್ರೀ ಶಿವಾನಂದ ಕವಳಿಕಟ್ಟಿ<br>ಜಿಲ್ಲಾ (ಬಿಮ್ಸ್ ಬೋಧಕ) ಆಸ್ಪತ್ರೆ<br>ಬೆಳಗಾವಿ | ಪಜಾ | ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು. |
| 2 | ಶ್ರೀಮತಿ ಯಶೋಧ ಬಿ.ವಿ<br>ಸಾರ್ವಜನಿಕ ಆಸ್ಪತ್ರೆ, ಮದ್ದೂರು, ಮಂಡ್ಯ ಜಿಲ್ಲೆ | ಸಾಮಾನ್ಯ | ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು. |
| 3 | ಶ್ರೀ ವೀರೇಶ್ ಕುಮಾರ ಕೆ.ಆರ್<br>ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡಜಿನ್ನಹಳ್ಳಿ,ತಾ:ಬಂಗಾರಪೇಟೆ, ಕೋಲಾರ ಜಿಲ್ಲೆ | ಸಾಮಾನ್ಯ | ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು. |
| 4 | ಶ್ರೀಮತಿ ಶೈಲಜಾ ಎನ್<br>ಪ್ರಾಥಮಿಕ ಆರೋಗ್ಯ ಕೇಂದ್ರ ದಿಡಗ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ | ಸಾಮಾನ್ಯ | ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು. |
| 5 | ಶ್ರೀ ಬಿ.ಎಸ್. ತಿಮ್ಮೇಶ್ ಪ್ರಭು<br>ಪ್ರಾಥಮಿಕ ಆರೋಗ್ಯ ಕೇಂದ್ರ ಬೂವನಹಳ್ಳಿ ಹಾಸನ ಜಿಲ್ಲೆ | ಸಾಮಾನ್ಯ | ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು. |

ಪೀಠಸ್ಥರು,
ಬಿ–ಫಾರ್ಮ ಪದವಿ ವ್ಯಾಸಂಗದ ಆಯ್ಕೆ ಸಮಿತಿ
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.

Director of Medical Education
Ananda Rao Circle, Bangalore